# ಐಹೊಳೆಯ ರಾವಣಫಡಿ



ಅರ್ಧ ನಾರೀಶ್ವರ



ಮಹಿಷಮರ್ದಿನಿ

■ ಚಿತ್ರ– ಬರಹ: **ಟಿ.ಎಸ್. ಗೋಪಾಲ್**

ಪ್ರಸಿದ್ಧ ಬಾದಾಮಿಯ ಗುಹಾಂತರ್ಗತ ದೇವಾಲಯಗಳನ್ನು ನಿರ್ಮಿಸುವುದಕ್ಕೆ ಮುನ್ನವೇ ನಿರ್ಮಾಣಗೊಂಡ ಗುಹಾದೇವಾಲಯಗಳು ಐಹೊಳೆಯಲ್ಲಿವೆ. ಇವು ನಿರ್ಮಾಣಗೊಂಡಿದ್ದು ಬಾದಾಮಿ ಚಾಲುಕ್ಯರ ಕಾಲದಲ್ಲಿ. ಐಹೊಳೆಯ ರಾವಣಫಡಿ ಎಂಬಲ್ಲಿನ ಗುಹಾದೇಗುಲಗಳು ಕ್ರಿ.ಶ. 550ರಲ್ಲಿ ಹಾಗೂ ಬಾದಾಮಿಯ ಗುಡಿಗಳು ಕ್ರಿ.ಶ. 578ರ ನಂತರ ರೂಪುಗೊಂಡವು. ಐಹೊಳೆಯಲ್ಲೇ ಮೇಗುತಿಬೆಟ್ಟದ ಮೇಲಿರುವ ಜೈನ ಹಾಗೂ ಬೌದ್ಧ ಗುಹಾದೇಗುಲಗಳು ಏಳನೆಯ ಶತಮಾನಕ್ಕೆ ಸೇರಿದವೆಂದು ಹೇಳಲಾಗಿದೆ.